**ಸಾಕ್ಷಿಗೆ ಇಂದು ದಿನಾಂಕಃ 17.10.2022 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

ಕಲಕೇರಿಯಿಂದ ಡವಳಾರ ಗ್ರಾಮ **30** ಕಿ ಮೀ ಅಂತರದಲ್ಲಿದೆ. ಸದರಿ ಅಂತರ ವಾಹನದಲ್ಲಿ ಸುಮಾರು **15** ನಿಮಿಷದಲ್ಲಿ ಕ್ರಮಿಸಬಹುದು ಎಂಬ ಪ್ರಶ್ನೆಗೆ ಸಾಕ್ಷಿ **20** ರಿಂದ **25** ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಿನಾಂಕ.**22.05.2017** ರಂದು ನನಗೆ ಕೃತ್ಯದ ಬಗ್ಗೆ ಮಾಹಿತಿ ಬಂದಾಗ ಬೆಳಿಗ್ಗೆ **9.00** ಗಂಟೆ ಆಗಿತ್ತು. ಠಾಣೆಯಿಂದ ಸುಮಾರು **9.30** ಕ್ಕೆ ಹೊರಟು ಘಟನಾ ಸ್ಥಳಕ್ಕೆ **10.00** ಗಂಟೆಗೆ ತಲುಪಿರುತ್ತೇವೆ.

ನಮ್ಮ ವಾಹನ ಅಂಬಿಗರ ಚೌಡಯ್ಯ ಸರ್ಕಲದ ಸುಮಾರು **100** ಮೀಟರ ಅಂತರದಲ್ಲಿ ನಿಲ್ಲಿಸಿದೆವು ಸದರಿ ಸ್ಥಳದ ಚಕಬಂದಿ ನನಗೆ ಹೇಳಲಾಗುವುದಿಲ್ಲ. ಸದರಿ ವೃತ್ತದಲ್ಲಿ ಸುಮಾರು **4** ರಸ್ತೆಗಳು ಇರುತ್ತವೆ. ಡವಳಾರ ಊರಿನ ಅಂಚಿನಲ್ಲಿ ಅಂಬಿಗರ ಚೌಡಯ್ಯ ಸರ್ಕಲ ಇದೆ. ಸದರಿ ಸ್ಥಳದಲ್ಲಿ ಅಂಗಡಿಗಳು ಇರುತ್ತವೆ ಎಂದರೆ ಸಾಕ್ಷಿ **3–4** ಅಂಗಡಿಗಳಿವೆ ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ಜನರು ನಿಂತಿರುತ್ತಾರೆ ಎಂದರೆ ಸರಿ. ಆರೋಪಿಯನ್ನು ಪ್ರಥವಾಗಿ ಚಾಸಾ–**5** ನೋಡಿರುತ್ತಾರೆ. ಆಗ ನಾನು ವಾಹನದಲ್ಲಿ ಕುಳಿತಿದ್ದೆ. ಚಾಸಾ–**5** ಪ್ರಥವಾಗಿ ಆರೋಪಿಯನ್ನು ನೋಡಿದ ವಿಚಾರ ಪಿರ್ಯಾದಿಯಲ್ಲಿ ಹೇಳಿರುವುದಿಲ್ಲ. ಆರೋಪಿಯನ್ನು ಪ್ರಥಮವಾಗಿ ಚಾಸಾ–**5** ಹಿಡಿದಿರುತ್ತಾರೆ.

ಘಟನಾ ಸ್ಥಳದ ಛಾಯಾಚಿತ್ರ ನಾನು ಸೆರೆ ಹಿಡಿದಿರುವುದಿಲ್ಲ ಮತ್ತು ಯಾವುದೇ ಚಿತ್ರೀಕರಣ ಮಾಡಿರುವುದಿಲ್ಲ. ಚಾಸಾ–**2** ಮತ್ತು **3** ರವರಿಗೆ ಯಾವುದೇ ಲಿಖಿತ ನೋಟಿಸು ನೀಡಿಲ್ಲ, ಮೌಖಿಕವಾಗಿ ತಿಳಿಸಿರುತ್ತೇವೆ. ಚಾಸಾ–**2** ವಲ್ಲಿಭಾಯಿ **3** ಲಾಳೇಪಟೇಲ ಆಗಿರುತ್ತಾರೆ. ಚಾಸಾ–**2** ಮತ್ತು **3** ಪೊಲೀಸ್ ಠಾಣೆಯ ಖಾಯಂ ಸಾಕ್ಷಿದಾರರು ಎಂದರೆ ಸರಿಯಲ್ಲ. ಚಾಸಾ–**2** ಮತ್ತು **3** ರವರಿಗೆ ಚಾಸಾ–**4** ಕರೆದುಕೊಂಡು ಬಂದಿರುತ್ತಾರೆ. ದಿನಾಂಕ.**22.09.2016** ರಂದು ನಾವು ದಾಳಿ ಮಾಡಿದಾಗ ಘಟನಾ ಸ್ಥಳದಲ್ಲಿ ಸುಮಾರು ಜನರು ಇದ್ದರು ಎಂದರೆ ಸರಿ. ಪ್ರಸ್ತುತ

ಪ್ರಕರಣ ಅಂಕೆ ಸಂಖ್ಯೆಗೆ ಆರೋಪಿಯ ಮೇಲೆ ಸುಳ್ಳು ಫಿರ್ಯಾದಿ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗು ಮುದ್ದೇಮಾಲಿಗು ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳು ಸಾಮಾನ್ಯವಾಗಿ ಮದ್ಯದ ಅಂಗಡಿ ಮತ್ತು ರಸ್ತೆ ಪಕ್ಕದಲ್ಲಿ ಬಿದ್ದಿರುತ್ತವೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.